## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಆರ್.ಜಿ.ನಾಯಕ್, ಹಿಂದಿನ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯಿತಿ, ಹಾವೇರಿ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ವನ್ನು ಕೈಬಿಡುವ ಬಗ್ಗೆ ಆದೇಶ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 67 ವಿಸೇಬಿ 2014 ದಿನಾಂಕ 18.03.2014.
2) ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನ ಸಂಖ್ಯೆ:ಲೋಕ್/ಎಆರ್ಇ-11/ಇಎನ್‌ಕ್ಯೂ-166/2014 ದಿನಾಂಕ 07.04.2017.

---

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ:-(1)ರ ಸರ್ಕಾರದ ಆದೇಶದಲ್ಲಿ ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಗುಡ್ಡ ಗುಡ್ಡಾಪುರ ಗ್ರಾಮದಲ್ಲಿ ನಿರ್ಮಿಸುತ್ತಿದ್ದ ಹಾತ್ ಮಾರಾಟ ಮಳಿಗೆ ಕಾಮಗಾರಿಯ ಪ್ರಥಮ ಬಿಲ್ಲಿನ ಮೊತ್ತ ರೂ.6,24,000/-ಗಳನ್ನು ಬಿಡುಗಡೆ ಮಾಡುವಂತೆ ಕೋರಿ ಸಿವಿಲ್ ಗುತ್ತಿಗೆದಾರರಾದ ಶ್ರೀ ಶ್ರೀನಿವಾಸ ಹನುಮರೆಡ್ಡಿ ಮೈದೂರ ಇವರು ಸಲ್ಲಿಸಿದ್ದ ಮನವಿಗೆ, ಸದರಿ ಮೊತ್ತವನ್ನು ಬಿಡುಗಡೆ ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ರಾಣಿಬೆನ್ನೂರು ಇವರಿಗೆ ಶಿಫಾರಸ್ಸು ಮಾಡಲು ಬಿಲ್ ಮೊತ್ತದ ಶೇ.3ರಷ್ಟು ಅಂದರೆ ರೂ.15,000/-ಗಳನ್ನು ಲಂಚವನ್ನಾಗಿ ನೀಡುವಂತೆ ಶ್ರೀ ರಮಾನಾಥ ಗೋವಿಂದರಾಜ ನಾಯಕ್, ಹಿಂದಿನ ಯೋಜನಾ ನಿರ್ದೇಶಕರು, (ಡಿ.ಆರ್.ಡಿ.ಎ.ಕೋಶ), ಜಿಲ್ಲಾ ಪಂಚಾಯತ್, ಹಾವೇರಿ, (ಪ್ರಸ್ತುತ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ) ಇವರು ಒತ್ತಾಯಿಸಿರುತ್ತಾರೆಂದು ಆರೋಪಿಸಿ, ಈ ಬಗ್ಗೆ ದೂರುದಾರರು ನೀಡಿದ್ದ ದೂರಿನ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಸೆಕ್ಷನ್-9 ರಡಿಯಲ್ಲಿ ವಿಚಾರಣೆಯನ್ನು ನಡೆಸಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾನ್ಯ ಲೋಕಾಯುಕ್ತರು, ದಿನಾಂಕ: 24.02.2014ರಂದು ನೀಡಿದ್ದ ವರದಿಯಲ್ಲಿ ಮಾಡಿದ್ದ ಶಿಫಾರಸ್ಸನ್ನಾಧರಿಸಿ, ಸದರಿ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ಜರುಗಿಸಲು ಪ್ರಕರಣವನ್ನು ಮಾನ್ಯ ಲೋಕಾಯುಕ್ತರು-1ರವರಿಗೆ ವಹಿಸಲಾಗಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಸದರಿ ಅಧಿಕಾರಿಯ ವಿರುದ್ಧದ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು, ವಿಚಾರಣೆಗಳು-10ರವರು ಸಮಗ್ರವಾಗಿ ನಡೆಸಿ, ದಿನಾಂಕ: 31.08.2017ರಂದು ಮಾನ್ಯ ಲೋಕಾಯುಕ್ತರವರಿಗೆ ನೀಡಿರುವ ವರದಿಯಲ್ಲಿ ಆರೋಪಿತ ಅಧಿಕಾರಿಯ ವಿರುದ್ಧದ ಆರೋಪಗಳು ಸಾಭೀತಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ.

ವಿಚಾರಣಾಧಿಕಾರಿಯು ನೀಡಿರುವ ವರದಿಯನ್ನಾಧರಿಸಿ, ಮಾನ್ಯ ಲೋಕಾಯುಕ್ತರು, ತಮ್ಮ ಶಿಫಾರಸ್ಸು ದಿನಾಂಕ 07.04.2017ರಂದು ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.:-

> " The report of the Enquiry Officer requires to be accepted and the proceedings initiated against the DGO Sri R.G.Nayak, the

then Project Director, (DRDA Cell), Zilla Panchayath, Haveri District (Presently working as Deputy Secretary, Zilla Panchayath, Belagum) requires to be dropped"

ಸದರಿ ವಿಚಾರಣಾಧಿಕಾರಿಗಳ ವರದಿ ಮತ್ತು ಮಾನ್ಯ ಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ, ಸರ್ಕಾರವು ಶ್ರೀ ಆರ್.ಜಿ.ನಾಯಕ್, ಹಿಂದಿನ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯಿತಿ, ಹಾವೇರಿ ಜಿಲ್ಲೆ (ಪ್ರಸ್ತುತ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕಾರವಾರ) ಇವರ ವಿರುದ್ಧ ದಿನಾಂಕ 08.04.2014ರಂದು ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಲು ನಿರ್ಧರಿಸಿದೆ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 113 ವಿಸೇಬಿ 2017 ದಿನಾಂಕ 25.07.2017**

ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನಂತೆ, ಶ್ರೀ ಆರ್.ಜಿ.ನಾಯಕ್, ಹಿಂದಿನ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯಿತಿ, ಹಾವೇರಿ ಜಿಲ್ಲೆ (ಪ್ರಸ್ತುತ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕಾರವಾರ) ಇವರ ವಿರುದ್ಧ ದಿನಾಂಕ 08.04.2014ರಂದು ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

25/7/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು-ಬಿ ಮತ್ತು ಸಿ)(ಪ್ರಭಾರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:-

1) ಮಹಾ ಲೇಖಪಾಲರು, ಕರ್ನಾಟಕ ವೃತ್ತ ( ಎ & ಇ), ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ/ಉತ್ತರ ಕನ್ನಡ.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಸಂಬಂಧಿಸಿದ ಅಧಿಕಾರಿಗೆ.

ಪ್ರತಿ ಮಾಹಿತಿಗಾಗಿ:-

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ-(ಆಡಳಿತ)ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.